ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರು ಮಾತನಾಡುವುದು ಯಾವುದಂ ರೆಕಾರ್ಡ್ ಆಗುವುದಿಲ್ಲ. (ರೆಕಾರ್ಡ್ ಮಾಡಬೇಡಿಯೆಂದು ಅಧಿಕೃತ ವರದಿಗಾರರಿಗೆ ಸೂಚಿಸಿದರು)

(ಗೊಂದಲ)

ಉಪಾಧ್ಯಕ್ಷರಂ.— ಮಾನ್ಯ ಯಡಿಯೂರಪ್ಪನವರು ದಯವಿಟ್ಟು ಕುಳಿತುಕೊಳ್ಳಬೇಕಂ.

ಶ್ರೀ ಕೆ. ಹೆಚ್. ರಂಗನಾಥ್.— ಒಂದು ಕೋಮಿಗೂ ಇನ್ನೊಂದು ಕೋಮಿಗೂ ದ್ವೇಷ ಮನೋಭಾವನೆ ಬರುವ ರೀತಿಯಲ್ಲಿ ಏನು ಮಾತನಾಡಿದ್ದಾರೆ ಅದು ಕಡತದಲ್ಲಿ ಹೋಗಬಾರದು.

ಉಪಾಧ್ಯಕ್ಷರು.— ನಾನು ಈಗಾಗಲೇ ರೆಕಾರ್ಡ್ ಮಾಡಬೇಡಿಯೆಂದು. ಸೂಚಿಸಿದ್ದೇನೆ. ಅಂತಹದ್ದು ಯಾವುದೂ ರೆಕಾರ್ಡ್ ಆಗಿರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಡತದಲ್ಲಿ ಹೋಗಲಾರದ ಮಾತನ್ನು ನಾನು ಯಾವುದೂ ಹೇಳಿಲ್ಲ. ನಿಮ್ಮ ತಹಶೀಲ್ದಾರ್‌ರವರು ಪೋಲೀಸ್‌ನವರ ಪ್ರಚೋದನೆಯಿಂದ ಸರ್ಕಾರದ ಪ್ರಚೋದನೆಯಿಂದ ಶಾಂತಿ ರೀತಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದವರನ್ನು ಗುಲ್ಬರ್ಗ ಜೈಲಿಗೆ ಕಳುಹಿಸಿದ ಉದ್ದೇಶವೇನು ? ಮುಂದೆ ಅವರು ಹೋರಾಟ ಮಾಡಬಾರದೆನ್ನುವ ಉದ್ದೇಶ ನಿಮ್ಮದು ಇದೆಯೇನು ? ಹಿಂದೂಗಳ ಭಾವನೆಯನ್ನು ದಮನ ಮಾಡುವ ಉದ್ದೇಶ ನಿಮಗೆ ಇದೆಯೆ ?

ಉಪಾಧ್ಯಕ್ಷರು.— ರೆಕಾರ್ಡ್ ಮಾಡಬೇಡಿ.

ಉಪಾಧ್ಯಕ್ಷರು.— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ದೇಶವನ್ನು ಛಿದ್ರ ಮಾಡಿದ್ದುದು ಯಾರು ಎಂಬುದು ಗೊತ್ತಾಗುತ್ತದೆ. ಬಿ.ಜೆ.ಪಿ. ಏನು ಎಂಬುದು ಇಡೀ ದೇಶಕ್ಕೇ ಗೊತ್ತಿದೆ...

(ಗೊಂದಲ)

ಉಪಾಧ್ಯಕ್ಷರು.— ಎಲ್ಲರೂ ಕುಳಿತುಕೊಳ್ಳಿ. ಶ್ರೀ ಯಡಿಯೂರಪ್ಪನವರೇ ನೀವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.— ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ. ಇದೇ ರೀತಿಯ ನೀತಿಯನ್ನು ಸರ್ಕಾರ ಮುಂದುವರೆಸಿದರೆ ನಾವು ಅದನ್ನು ಸಹಿಸುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.— ಶ್ರೀ ಹನುಮೇಗೌಡರೇ, ನೀವು ಸರ್ಕಾರದ ಗಮನ ಸೆಳೆಯಿರಿ.....

ಶ್ರೀ ಮಲ್ಲಾರಗೌಡ ಎಸ್ ಪಾಟೀಲ್.— ಮಾನ್ಯ ಉಪಾಧ್ಯಕ್ಷರೇ, ಮಾತನಾಡಲಿಕ್ಕೆ ಒಂದ ವಿಷಯ ಇರಬೇಕು. ಸದನದ ಬಗ್ಗೆ ಗೌರವ ಇರಬೇಕು. ಪದೆಪದೇ ಎದ್ದುನಿಂತು ಈ ರೀತಿ ಮಾತನಾಡುವುದಂ ಗೌರವ ಅಲ್ಲ. ವಾಕ್‌ಔಟ್ ಮಾಡುವುದಾದರೆ ಮಾಡಲಿ, ಪ್ರತಿಭಟನೆ ಬೇಕಾದರೆ ಮಾಡಲಿ .....

(ಗೊಂದಲ)

ಉಪಾಧ್ಯಕ್ಷರು.— ಹೀಗೆ ನಾಲ್ಕು-ನಾಲ್ಕು ಜನ ಎದ್ದುನಿಂತಂ ಮಾತನಾಡಿದರೆ ಹೇಗೆ ? ಶ್ರೀ ಯಡಿಯೂರಪ್ಪನವರೇ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಈಗ ನೀವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

(ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು.— ಶ್ರೀ ಹನುಮೇಗೌಡರೇ, ಮಂತ್ರಿಗಳ ಗಮನ ಸೆಳೆಯಿರಿ...